ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 22.04.2026
ಮುಖ್ಯವಿಚಾರಣೆ ಃ ಅರ್ಜಿದಾರರ ಪರ ಶ್ರೀ ಎಸ ಎಸ ಜಿ ವಕೀಲರಿಂದಃ

ನಾನು ಅರ್ಜಿದಾರ ಇದ್ದು , ನನ್ನ ಮುಖ್ಯ ಸಾಕ್ಷಿಗೆ ಅನುಗುಣವಾಗಿ ನ್ಯಾಯಾಲಯಕ್ಕೆ ಈಗ ನನ್ನ ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯವಿರುತ್ತವೆ. ಸದರಿ ಈ ಕೇಸನಲ್ಲಿ ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತೇನೆ.

1) ಅಸಲು ದಾವೆ ನಂ. 152/2023 ರ ತೀರ್ಪು ಮತ್ತು ಡಿಕ್ರಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು ,

2) ಅಸಲು ದಾವೆ ನಂ. 152/2023 ರಲ್ಲಿನ ರೋಜನಾಮೆಯ ದೃಡಿಕೃತ ಪ್ರತಿಯನ್ನು ನಿಪಿ-3 ಎಂದು ಗುರುತಿಸಲಾಯಿತು.

3) ಅಸಲು ದಾವೆ ನಂ. 152/2023 ರ ಸಮನ್ಸನ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು ,

4) ಅಸಲು ದಾವೆ ನಂ. 152/2023 ರ ಸಮನ್ಸನ ಜಾರಿಕಾರರ ವರದಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು ,

5) ಅಸಲು ದಾವೆ ನಂ. 152/2023 ರ ಸಮನ್ಸನ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು ,

6) ಅಸಲು ದಾವೆ ನಂ. 152/2023 ರ ಸಮನ್ಸನ ಜಾರಿಕಾರರ ವರದಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು

7) ಅರ್ಜಿ ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

8) ಅರ್ಜಿ ಸ್ವತ್ತಿಗೆ ಸಂಬಂಧಿಸಿದ ಹಕ್ಕು ಬದಲಾವಣೆ ವಹಿಯನ್ನು ಹಾಜರುಪಡಿಸಿದ್ದು ನಿಪಿ-9 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ವಕೀಲರು ಸಮಯವಕಾಶ ಕೋರಿದ್ದು ಅನುಮತಿಸಿ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**

—